# CODE OF CONDUCT FOR STUDENTS.

## ನಿಯಮಗಳು

1) ಪ್ರತಿ ವಿದ್ಯಾರ್ಥಿಗೂ ಒಂದು ಗುರುತಿನ ಪತ್ರ (ID) ಕೊಡಲಾಗುವುದು. ಅದರ ಮೇಲೆ ತನ್ನ ಇತ್ತೀಚಿನ ಭಾವಚಿತ್ರ (Photo) ವನ್ನು ಅಂಟಿಸಿ ಪ್ರಾಚಾರ್ಯರಿಂದ ಸಹಿ ಮಾಡಿಸಿಕೊಳ್ಳಬೇಕು. ಲೈಬ್ರರಿಯಿಂದ ಪುಸ್ತಕ ಪಡೆಯುವಾಗ ಈ ಗುರುತಿನ ಪತ್ರ ಕೊಟ್ಟು ಬೇಕಾದ ಪುಸ್ತಕವನ್ನು ಲೈಬ್ರರಿಯಲ್ಲಿಯೇ ಉಪಯೋಗಿಸಿ ಹಿಂದಿರುಗಿಸಬೇಕು. ಯಾವುದೇ ಬಗೆಯ ಸರ್ಟಿಫಿಕೇಟ್ ಇಲ್ಲವೇ ಹಣ ಪಡೆಯುವಾಗ ಈ ಗುರುತಿನ ಪತ್ರ ತರಲೇಬೇಕು. ಪರೀಕ್ಷೆಯಲ್ಲೂ ಇದು ವಿದ್ಯಾರ್ಥಿ ಹತ್ತಿರ ಇರಬೇಕಾದದ್ದು. ಕಾಲೇಜು ಸಿಬ್ಬಂದಿ ಕೇಳಿದಾಗ ತೋರಿಸಬೇಕು.
2) ಒಂದು ವೇಳೆ ಗುರುತಿನ ಪತ್ರವನ್ನು ಕಳೆದುಕೊಂಡಲ್ಲಿ ಕೂಡಲೇ ಈ ವಿಷಯವನ್ನು ಬರಹದಲ್ಲಿ ಗ್ರಂಥಪಾಲಕರಿಗೆ ತಿಳಿಸಬೇಕು. ಗುರುತಿನ ಪತ್ರ ಪಡೆಯಬೇಕಾದಲ್ಲಿ ರೂ. 25–00 ಶುಲ್ಕ ಕೊಡಬೇಕಾಗುವುದು.
3) ಯಾವುದೇ ವಿದ್ಯಾರ್ಥಿಯು ತಾನು ಆಯ್ದುಕೊಂಡ ವಿಷಯಗಳಲ್ಲಿ ನಡೆದ ಒಟ್ಟು ಉಪನ್ಯಾಸಗಳಲ್ಲಿ ಕನಿಷ್ಠ ಪಕ್ಷ ಪ್ರತಿಶತ 75ರಷ್ಟಾದರೂ ಉಪಸ್ಥಿತರಿರಬೇಕು. ಹಾಗೇ ಹಾಜರಾಗದಿದ್ದಲ್ಲಿ ವಿಶ್ವವಿದ್ಯಾಲಯದ ನಿಯಮಾನುಸಾರ ಅವನಿಗೆ ಪರೀಕ್ಷೆ ಕೂಡಲು ಅನುಮತಿಯನ್ನು ನಿರಾಕರಿಸಬಹುದು.
4) ಯಾವುದೇ ವಿದ್ಯಾರ್ಥಿಯು ಕಾಲೇಜಿನಲ್ಲಿ ಡೆಸ್ಕ್ ಮುಂತಾದ ಪರ್ನಿಚರ ಮೇಲಾಗಲಿ ಗೋಡೆ ಮುಂತಾದವುಗಳ ಮೇಲೆ ಏನನ್ನು ಬರೆಯಬಾರದು. ಬರೆದಿದ್ದು ಕಂಡುಬಂದಲ್ಲಿ ಅಂಥವರನ್ನು ಅಶಿಸ್ತಿನ ನಡುವಳಿಕೆ ಎಂದು ತಿಳಿದು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.
5) ಕಾಲೇಜಿನಲ್ಲಾಗಲೀ, ಹೊರಗಾಗಲೀ ವಿದ್ಯಾರ್ಥಿಗಳು ಅಶಿಸ್ತಿನಿಂದ ನಡೆದುದಾದರೆ ಅವನ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.
6) ಕಾಲೇಜಿಗೆ ಸಂಬಂಧಿಸಿದ ವಿಷಯವನ್ನು ಪತ್ರಿಕೆಗಳಿಗೆ ಬರೆಯುವ ಮುನ್ನ ಪ್ರಾಚಾರ್ಯರ ಅನುಮತಿ ಪಡೆದಿರಬೇಕು.
7) ಕಾಲೇಜಿನಲ್ಲಿ ಯಾವುದೇ ಹೊರಗಿನ ವ್ಯಕ್ತಿಯನ್ನು ಆಹ್ವಾನಿಸಬೇಕಾದಲ್ಲಿ ಹಾಗೂ ಅವರ ಭಾಷಣ ಏರ್ಪಡಿಸುವುದಿದ್ದಲ್ಲಿ ಅವರನ್ನು ಅಹ್ವಾನಿಸುವ ಮೊದಲೇ ಪ್ರಾಚಾರ್ಯರಿಂದ ಅನುಮತಿಯನ್ನು ಪಡೆದಿರಬೇಕು.
8) ತಮ್ಮದಲ್ಲದ ವಿಷಯದ ಮೇಲೆ ಇಲ್ಲವೇ ಬೇರೆ ಕ್ಲಾಸಿನಲ್ಲಿ ನಡೆಯುವ ಉಪನ್ಯಾಸಗಳಿಗೆ ವಿದ್ಯಾರ್ಥಿಗಳು ಉಪಸ್ಥಿತರಿರುವುದನ್ನು ಪ್ರತಿಬಂಧಿಸಲಾಗಿದೆ.
9) ಗುರುತಿನ ಚೀಟಿಯ ಮೇಲೆ ಪಡೆದ ಪುಸ್ತಕಗಳನ್ನು ಗ್ರಂಥಾಲಯದ ಹೊರಗೆ ತೆಗೆದುಕೊಂಡು ಹೋಗಕೂಡದು.
10) ಮನೆಗೆ ಒಯ್ಯಬೇಕಾದ ಪುಸ್ತಕಗಳಿಗಾಗಿ ಬೇಡಿಕೆ (Demand Slip) ಯನ್ನು ನಿಗದಿತ ದಿನಕ್ಕಿಂತ 24 ಘಂಟೆ ಮೊದಲೇ ಗ್ರಂಥಪಾಲಕರಿಗೆ ಕೊಡಬೇಕು. ಅಂತಹ ಪುಸ್ತಕಗಳನ್ನು 2 ವಾರಗಳವರೆಗೆ ಮಾತ್ರ ಇಟ್ಟುಕೊಳ್ಳಬಹುದು.
11) ಗ್ರಂಥಾಲಯದಿಂದ ಪಡೆದ ಪುಸ್ತಕಗಳು ಕಳೆದಲ್ಲಿ ಅವನ್ನು ವಿದ್ಯಾರ್ಥಿಯು ಆ ಪುಸ್ತಕದ ಹೊಸ ಪ್ರತಿ ಇಲ್ಲವೇ ಅದರ ಬೆಲೆಯ 2ರಷ್ಟು ಹಣವನ್ನು ಕೂಡಲೇ ಪಾವತಿ ಮಾಡಬೇಕು.
12) ಪುಸ್ತಕಗಳನ್ನು ಸರಿಯಾಗಿ ಉಪಯೋಗಿದೇ ಹರಿದರೆ, ಇಲ್ಲವೇ ಏನಾದರೂ ಗೀಚಿದರೆ ಅಂತಹ ಪುಸ್ತಕಗಳ ಬದಲಾಗಿ ಹೊಸ ಪ್ರತಿಗಳನ್ನು ಇಲ್ಲವೇ 2 ರಷ್ಟು ಹಣವನ್ನು ಕೂಡಲೇ ಪಾವತಿ ಮಾಡಬೇಕು.
13) ಕಾಲೇಜಿನಲ್ಲಿ ಅ) ಚರ್ಚಾಕೂಟ ಆ) ಜಮಖಾನ ಇ) ಕಾಲೇಜು ಪತ್ರಿಕೆ (Miscellany) ಈ) ಸಾಂಸಕೃತಿಕ ಸಂಘ ಉ) ಯೋಜನಾ ವೇದಿಕೆ ಹಾಗೂ ಊ) ಮಹಿಳಾ ಸಂಘಗಳಿದ್ದು ಈ ಕಾಲೇಜಿನ ವಿದ್ಯಾರ್ಥಿಗಳು 'ಅ' ದಿಂದ 'ಊ' ವರೆಗಿನ ಸಂಘಗಳಿಗೆ ಸದಸ್ಯರಾಗಿರುತ್ತಾರೆ. ವಿದ್ಯಾರ್ಥಿನಿಯರು 'ಅ' ದಿಂದ 'ಊ' ವರೆಗಿನ ಸಂಘಗಳಿಗೆ ಸದಸ್ಯರಾಗಿರುತ್ತಾರೆ.

14) ಈ ಎಲ್ಲಾ ಸಂಘಗಳಿಗೆ ಪ್ರಾಚಾರ್ಯರೇ ಅಧ್ಯಕ್ಷರಾಗಿದ್ದು ಅವರಿಂದ ನೇಮಕಗೊಂಡ ಪ್ರಾಧ್ಯಾಪಕ ಚೇರಮನ್ನರಿಂದ ಪ್ರತಿಯೊಂದು ಸಂಘ ಕಾರ್ಯ ನಡೆಸುತ್ತದೆ.

15) ಯಾವುದೇ ಬಿನ್ನಾಭಿಪ್ರಾಯವಿದ್ದಾಗ ಪ್ರಾಚಾರ್ಯರ ನಿರ್ಣಯವೇ ಅಂತಿಮ. ಎಲ್ಲರಿಗೂ ಬಂಧನಕಾರಿಯೂ ಆಗಿರುತ್ತದೆ.

16) ಮೇಲಿನ ಸಂಘಗಳ ಸೆಕ್ರೆಟರಿ ಹುದ್ದೆಗಾಗಿ ಯಾವುದೇ ಬಗೆಯ ಚುನಾವಣೆ ಇರುವುದಿಲ್ಲ.

17) ವಿದ್ಯಾರ್ಥಿಗಳಿಗೆ ಕಾಲೇಜ ಆಫೀಸಿನಿಂದ ಹಣ ಸಂದಾಯವಾಗಬೇಕಾದ್ದಲ್ಲಿ ಅದನ್ನು (Account Payee) ಚೆಕ್ ಮುಖಾಂತರವೇ ಕೊಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಹೆಸರಿನಲ್ಲಿ ಒಂದು ಬ್ಯಾಂಕ್ ಅಕೌಂಟ್ ಹೊಂದಿರುವುದು. ಅವಶ್ಯವಾಗಿದೆ.

18) ಕ್ಯಾರೆಕ್ಟರ್ ಮುಂತಾದ ಸರ್ಟಿಫಿಕೇಟ್ ಬೇಕಾದಲ್ಲಿ 10/– ರೂ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬೇಕು.

19) ರ್‍ಯಾಗಿಂಗ್ (Ragging) ನಲ್ಲಿ ಪಾಲ್ಗೊಂಡದ್ದು ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಯನ್ನು ಪೋಲಿಸರ ವಶಕ್ಕೆ ಕೊಡಲಾಗುದಲ್ಲದೇ ಕಾಲೇಜಿನಿಂದ ಹೊರಹಾಕಬಹುದು.

20) ವಿದ್ಯಾರ್ಥಿಗಳು ಮಹಾವಿದ್ಯಾಲಯ ನಡೆಸುವ ತ್ರೈಮಾಸಿಕ, ಅರ್ಧವಾರ್ಷಿಕ, ಪೂರ್ವಭಾವಿ ಹಾಗೂ ಇನ್ನಿತರ ಪರೀಕ್ಷೆಗಳಿಗೆ ತಪ್ಪದೇ ಹಾಜರಾಗಬೇಕು. ಇಲ್ಲವಾದಲ್ಲಿ ಅವರು ಪ್ರತಿ ಪರೀಕ್ಷೆಗೆ ರೂ. 10/–ರಂತೆ ದಂಡ ಕೊಡಬೇಕಾಗುತ್ತದೆ.

21) ವರ್ಗಗಳು ನಡೆಯುವ ಅವಧಿಯಲ್ಲಿ ಯಾವ ವಿದ್ಯಾರ್ಥಿಯು ಮಹಾವಿದ್ಯಾಲಯದ ಆವರಣದಲ್ಲಿ ಅತ್ತಿತ್ತ ನಿಲ್ಲವುದು ಅಡ್ಡಾಡುವುದು ಹಾಗೂ ಗುಂಪುಗೂಡಿ ನಿಲ್ಲವುದನ್ನು ಪ್ರತಿಬಂಧಿಸಲಾಗಿದೆ. ಇದನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದಲ್ಲಿ ಪ್ರವೇಶವನ್ನು ರದ್ದು ಮಾಡಲಾಗುವುದು.

22) ಮಹಾವಿದ್ಯಾಲಯದ ಆವರಣದಲ್ಲಿ ಬೀಡಿ, ಸಿಗರೇಟ್, ತಂಬಾಕು, ಅಡಿಕೆ ಚೀಟುಗಳನ್ನು ಸೇವಿಸುವುದನ್ನು ನಿಷೇಧಿಸಲಾಗಿದೆ. ತಪ್ಪಿದಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

23) ವಿದ್ಯಾರ್ಥಿಗಳು ಮಹಾವಿದ್ಯಾಲಯದ ಘನತೆಗೆ ಕುಂದು ಬಾರದಂತೆ ಶಿಸ್ತಿನಿಂದ ವರ್ತಿಸಬೇಕು. ಮಹಾವಿದ್ಯಾಲಯದ ಒಳಗೆ, ಹೊರಗೆ ಯಾವುದೇ ವಿದ್ಯಾರ್ಥಿಯ ದುರ್ನಡತೆಯನ್ನು ನಮ್ಮ ನಿಯಮಗಳ ಉಲ್ಲಂಘನೆ ಎಂದು ತಿಳಿದು ಅದನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ತರನ್ನು ಮಹಾವಿದ್ಯಾಲಯದಿಂದ ಹೊರಗೆ ಹಾಕಲಾಗುವುದು.

24) ವಿದ್ಯಾರ್ಥಿಗಳಿಗೆ ಬೇಕಾಗಬಹುದಾದ ಎಲ್ಲ ಪುಸ್ತಕಗಳನ್ನು ಕಾಲೇಜಿನ ಗ್ರಂಥಾಲಯದಿಂದ ಕೊಡಲಾಗುವುದಿಲ್ಲ. ಪುಸ್ತಕಗಳ ಲಭ್ಯತೆಯನ್ನು ಆಧರಿಸಿ ವಿದ್ಯಾರ್ಥಿಗಳಿಗೆ ಕೆಲವೊಂದು ಪುಸ್ತಕಗಳನ್ನು ನಿಯಮಾನುಸಾರವಾಗಿ ನೀಡಲಾಗುವುದು. ತಮಗೆ ಬೇಕಾದ ಲೇಖಕರ ಪುಸ್ತಕಗಳನ್ನು ಖರೀದಿಸಲು ಸಿದ್ದರಿರಬೇಕು.

25) ಪ್ರವೇಶ ಪಡೆಯುವ ಮೊದಲು ವಿದ್ಯಾರ್ಥಿಗಳು ಹಾಗೂ ಪಾಲಕರು ನಮ್ಮ ಮಹಾವಿದ್ಯಾಲಯದಲ್ಲಿರುವ ಸೌಲಭ್ಯಗಳನ್ನು ಪರಿಶೀಲಿಸಿ ಪ್ರವೇಶವನ್ನು ಪಡೆಯಲು ಸೂಚಿಸಲಾಗಿದೆ.

<u>ಕಾಲೇಜು ಪತ್ರಿಕೆ</u> : ಪ್ರಾಚಾರ್ಯರಿಂದ ನೇಮಕಗೊಂಡ ಅಧ್ಯಾಪಕರೊಬ್ಬರ ಮುಖ್ಯ ಸಂಪಾದಕತ್ವದಲ್ಲಿ ಇನ್ನಿತರ ವಿಭಾಗೀಯ ಸಂಪಾದಕರ ಹಾಗೂ ನೇಮಕಗೊಂಡ ವಿದ್ಯಾರ್ಥಿ ಪ್ರತಿನಿಧಿಗಳು ಸಂಪಾದಕ ಮಂಡಳಿ ಕಾಲೇಜು ಪತ್ರಿಕೆಯನ್ನು ಪ್ರಕಟಿಸುವುದು. ಇದು ವಿದ್ಯಾರ್ಥಿಗಳ ಹಾಗೂ ಪ್ರಾಧ್ಯಾಪಕರ ಸೌಜನ್ಯಾತ್ಮಕ ಬರವಣಿಗೊಂಡು ಉತ್ತಮ ಮಾಧ್ಯಮವಾಗುವುದು.

<u>ಟ್ರಾನ್ಸಫರ್ ಸರ್ಟಿಫಿಕೇಟ್</u> : ಬೇರೆ ಕಾಲೇಜಿನಿಂದ ಈ ಕಾಲೇಜಿಗೆ ಬರಬೇಕೆನ್ನುವ ತಾನು ಮೊದಲು ಕಲಿತ ಕಾಲೇಜಿನಿಂದ ಟಿ.ಸಿ. ಯನ್ನು ತರಬೇಕಾಗುತ್ತದೆ. ಅದನ್ನು ನಿರ್ದಿಷ್ಟ ಅವಧಿಯಲ್ಲಿ ತಂದು ಈ ಕಾಲೇಜಿಗೆ ಕೊಡದಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂಡ್ರದಂತೆ ತಡೆಹಿಡಿಲಾಗುವುದು.

ಪ್ರಾಂಶುಪಾಲರು
ಪ್ರಾಚಾರ್ಯರು
ಬ್ಯಾಡಗಿ ಶಿಕ್ಷಣ ಸಂಸ್ಥೆಯ ವರ್ತಕರ
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಬ್ಯಾಡಗಿ-581106. ಜಿ॥ ಹಾವೇರಿ